**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ**34/2021**

ಸಿ.ಡಬ್ಲ್ಯೂ –05 ಪಿ.ಡಬ್ಲ್ಯೂ -2

| | | |
|---|---|---|
| ಹೆಸರು | ಃ | ಪುತಳಾಬಾಯಿ |
| ತಂದೆಃಗಂಡ | ಃ | ಶಂಕ್ರೆಪ್ಪ |
| ವಯಸ್ಸು | ಃ | 41 ವರ್ಷ |
| ಉದ್ಯೋಗ | : | ಅಡುಗೆ ಕೆಲಸ |
| ವಾಸಸ್ಥಳ | ಃ | ಕಿಣ್ಣಿ ಅಬ್ಬಾಸ |

ದಿನಾಂಕಃ24.07.2023

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ**

ಆರೋಪಿತರ ಪರಿಚಯ ಇರುತ್ತದೆ. ಚಾಸಾ-1 ರಿಂದ 4, 6 ರವರ ಪರಿಚಯ ಇರುತ್ತದೆ. ಶಾಲೆಯಲ್ಲಿ ನಾವು ಊಟ ಬಡಿಸುತ್ತಿದ್ದೇವು ಅವರು ಜಗಳ ಮಾಡುತ್ತಿದ್ದರು. ನನಗೆ ಮತ್ತೇನು ಗೊತ್ತಿಲ್ಲ.

ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾ ಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ದಿ.20.05.2020 ರಂದು ಚಾಸಾ-4 ರವರು ಮುಂಬಯಿಯಿಂದ ಮರಳಿ ಕಿಣ್ಣಿ ಅಬ್ಬಾಸ ಬಂದಿರುತ್ತಾನೆ ಎಂದರೆ ಸರಿ. ಚಾಸಾ-4 ರವರನ್ನು ಚಾಸಾ-1 ರವರು ಕ್ವಾರಂಟೈನ ಮಾಡಲು ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿ. 1 ನೇ ಆರೋಪಿ ಮುಂಚೆಯೇ ಕ್ವಾರಂಟೈನ ಅಗಿರುತ್ತದೆ ಎಂದರೆ ಸರಿ. 1 ನೇ ಆರೋಪಿ ಚಾಸಾ-1 ರವರಿಗೆ ಎ ಆಶಾ ನಿಲ್ಲು ಚಿಕನ, ಮಾಂಸ ಮತ್ತು ಮೀನು ಹಾಗೂ ಮಕ್ಕಳಿಗೆ ಚಿಪ್ಸ ಕೊಡಿಸು ಎಂದು ಕೇಳಿದನು ಎಂದರೆ ನನಗೆ ಗೊತ್ತಿಲ್ಲ. ನನಗೆ ಅದರ ಅಧಿಕಾರ ಇರುವುದಿಲ್ಲ ನಮ್ಮ ಮೇಲಾಧಿಕಾರಿ ಬಂದ ನಂತರ ಹೇಳುತ್ತೇನೆ ಎಂದು ಚಾಸಾ-1 ರವರು ಹೇಳಿದರು ಎಂದರ ಸರಿ. ಸೋಮನಾಥರವರು ಆಗ ಜೋರಾಗಿ ಚೀರಿದರು ಎಂದರೆ ಸರಿ. 1 ನೇ ಆರೋಪಿ ನನ್ನನ್ನು ನೀನು ತೆಗೆದುಕೊಂಡು ಬಂದಿದ್ದಿಯಾ ಪಿಡಿಓ ಅಲ್ಲ ಎಂದು ಹೇಳಿದರು ಎಂದರೆ ಸಾಕ್ಷಿ ನಾನು ಕೋಣೆಯೊಳಗೆ ಇದ್ದ ಕಾರಣ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಚಾಸಾ-1 ರವರಿಗೆ 1 ನೇ ಆರೋಪಿ ಅವಾಚ್ಯವಾಗಿ ಬೈದು ಕೈ ಹಿಡಿದು ತಿರುಗಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಆರೋಪಿಯ ತಾಯಿ ತಂಗಿ, ಹೆಂಡತಿ ಚಾಸಾ-1 ರವರನ್ನು ಕೆಳಗೆ ಹಾಕಿ ಕಲ್ಲಿನಿಂದ ಎದೆಯ ಮೇಲೆ ಹಾಗೂ ಇನ್ನಿತರ ಭಾಗದಲ್ಲಿ ಜಜ್ಜಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಚಾಸಾ-1 ರವರು ಪ್ರಜ್ಞೆ ತಪ್ಪಿ ಬಿದ್ದಾಗ ಕ್ವಾರಂಟೈನ ಸೆಂಟರದವರು ನೀರು ಕುಡಿಸಿ ಅವಳ ಗಂಡ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾನೆ ಎಂದರೆ ಸಾಕ್ಷಿ ನನಗೆ ಕೇವಲ ಆಸ್ಪತ್ರೆಗೆ ಕರೆದುಕೊಂಡು ಹೋದ ಬಗ್ಗೆ ಗೊತ್ತು ಎಂದು ಹೇಳುತ್ತಾರೆ. ಆರೋಪಿತರು ಚಾಸಾ-1 ರವರ ಕರ್ತವ್ಯಕ್ಕೆ ಅಡೆ ತಡೆ ಉಂಟು ಮಾಡಿ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿಯಲ್ಲ.

ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸದರಿ ಘಟನೆ ಬಗ್ಗೆ ನಾನು ಮಾದನ ಹಿಪ್ಪರಗಾ ಪೋಲಿಸ್‌ರ ಮುಂದೆ ಈ ಕಳಗೆ ಓದಿ ಹೇಳಿದಂತೆ ದಿನಾಂಕ:22.05.2020 ರಂದು ಈಗ ಓದಿ ಹೇಳಿದ ಹಾಗೇ ............ ನೀಡಿದ ಹೇಳಿಕೆ " ಎಂದು ಹೇಳಿಕೆ ಕೊಟ್ಟಿರುತ್ತೆನೆ ಎಂದರೆ ಸರಿ ಅಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆಯನ್ನು ನಿಪಿ-2 ಎಂದು ಗುರುತಿಸಲಾಯಿತು.

ನಿಪಿ-2 ರ ಪ್ರಕಾರ ಹೇಳಿಕೆ ಸಲ್ಲಿಸಿದರೂ ಸಹಿತ ಈಗ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿ ಅಲ್ಲ.

**<u>ಪಾಟೀ ಸವಾಲು ಆರೋಪಿ ಪರ ಶ್ರೀ ಎಸ.ಎಸ.ಸಿ. ವಕೀಲರಿಂದ</u>**

ನನ್ನ ಗಂಡನ ಹೆಸರು ಶಂಕ್ರಪ್ಪ ಇಂಡಿ ಎಂದರೆ ಸರಿ. ನನಗೆ ಶಾಲೆಯಲ್ಲಿ ಅಡುಗೆ ಮಾಡುವ ನೌಕರಿ ಇರುತ್ತದೆ. ಪೋಲಿಸರು ನಾನು ನೌಕರಿ ಮಾಡುತ್ತಿರುವ ಬಗ್ಗೆ ಆದೇಶವನ್ನು ಕೇಳಿರುವುದಿಲ್ಲ. ಕ್ವಾರಂಟೈನ ಸೆಂಟರನಲ್ಲಿ ನಾನು ಕೆಲಸ ಮಾಡುತ್ತಿದ್ದ ಬಗ್ಗೆ ಪೋಲಿಸರು ಆದೇಶವನ್ನು ಕೇಳಿರುವುದಿಲ್ಲ. ಚಾಸಾ-4 ರವರು ಘಟನೆ ನಡೆದ ಸಂಜೆಯೇ ಮಂಬಯಿಯಿಂದ ಕ್ವಾರಂಟೈನ ಸೆಂಟರಗೆ ಬಂದಿದ್ದರು. ಚಾಸಾ-4 ರವರು ಕ್ವಾರಂಟೈನ ಅಗುವ 2-3 ದಿನಗಳ ಹಿಂದೆ 1 ನೇ ಆರೋಪಿ ಕ್ವಾರಂಟೈನ ಅಗಿದ್ದನು. ಸುಮಾರು 45 ಜನರು ಕ್ವಾರಂಟೈನ ಇದ್ದರು. ಅವರ ಹೆಸರುಗಳು ಹೇಳಲು ಆಗುವುದಿಲ್ಲ. 1 ನೇ ಆರೋಪಿ ಹಾಗೂ ಅವನ ಹೆಂಡತಿ ಕ್ವಾರಂಟೈನ ಇದ್ದರು. 1 ನೇ ಆರೊಪಿ ಹಾಗೂ ಅವನ ಹೆಂಡತಿ ಕ್ವಾರಂಟೈನ ಇದ್ದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರು ನಮ್ಮೂರವರೇ ಎಂದರೆ ಸರಿ. ಚಾಸಾ-1 ರವರ ಮದುವೆ ಅಗಿರುತ್ತದೆ. ಚಾಸಾ-1 ರವರ ಮುಂಚೆ ಅವರ ಸಹೋದರಿ ಶರಣಮ್ಮ ಆಶಾ ಕಾರ್ಯಕರ್ತೆ ಇದ್ದಳು ಎಂದರೆ ಸರಿ. ಶರಣಮ್ಮರವರು ಮದುವೆ ಅದ ನಂತರ ಚಾಸಾ-1 ರವರು ಆಶಾ ಕಾರ್ಯಕರ್ತೆ ಆಗಿ ಶರಣಮ್ಮರವರ ಪರವಾಗಿ ಕಾರ್ಯ ನಿರ್ವಹಿಸುತ್ತಿದ್ದರು ಎಂದರೆ ಸರಿಯಲ್ಲ. ನನಗೆ ಅದರ ಅಧಿಕಾರ ಇರುವುದಿಲ್ಲ ನಮ್ಮ ಮೇಲಾಧಿಕಾರಿ ಬಂದ ನಂತರ ಹೇಳುತ್ತೇನೆ ಎಂದು ಚಾಸಾ-1 ರವರು ಹೇಳಿದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಅರೋಪಿ ಜೋರಾಗಿ ಚೀರಿರುತ್ತಾನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತಿತದ್ದೆನೆ ಎಂದರೆ ಸರಿಯಲ್ಲ. ಸ.ಸ.ಅ. ರವರು ಓದಿ ಹೇಳಿದ ನಂತರವೇ ಘಟನೆ ಬಗ್ಗೆ ಗೊತ್ತಾಗಿರುತ್ತದೆ ಎಂದರೆ ಸರಿ.

**ಮರುವಿಚಾರಣೆಃ-** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ